**ಈ ವಾರದ ಪಾಠವನ್ನು ಸಬ್ಬತ್ತಿಗಾಗಿ ಅಧ್ಯಯನ ಮಾಡಿರಿ, ಮಾರ್ಚ್ 10 .**
**ಪಾಠ 10 ಪಾರುಪತ್ಯಗಾರಿಕೆಯ ಪಾತ್ರ ಮಾರ್ಚ್ 3–9**

# ಪಾರುಪತ್ಯಗಾರಿಕೆಯ ಪಾತ್ರ

ಸಬ್ಬತ್ತಿನ ಮಧ್ಯಾಹ್ನ:

ಈ ವಾರದ ಪಾಠದ ಅಧ್ಯಯನಕ್ಕಾಗಿ:ಕೊಲೋಸ್ಸೆ 1:16–18,ಇಬ್ರಿಯರಿಗೆ 4:14–16; 3 ಯೋಹಾನ 3, ಆದಿಕಾಂಡ 6:13–18; ಪ್ರಕಟಣೆ 14:6–12; 1 ಪೇತ್ರನು 1:15,16.

**ಸ್ಮರಣವಾಕ್ಯ:'ದೇವರು ನಮ್ಮನ್ನು ಬಂಡತನಕ್ಕೆ ಕರೆಯದೆ ಶುದ್ಧರಾಗಿರುವುದಕ್ಕೆ ಕರೆದನು. (1 ಥೆಸಲೋನಿಕದವರಿಗೆ 4:7)**

ಪಾರುಪತ್ಯಗಾರಿಕೆಯ ಅಳ ಮತ್ತು ವಿಶಾಲತೆಯಲ್ಲಿ ದೊಡ್ಡ ಚಿತ್ರಣವನ್ನು ಮರೆಯುವುದು ಬಹಳ ಸುಲಭ. ಯಾಕೆಂದರೆ ಈ ವಿಷಯದ ಅಗಾಧತೆಯಲ್ಲಿ ನಮ್ಮನ್ನು ನಾವು ಕಳೆದುಕೊಳ್ಳುತ್ತೇವೆ. ಪಾರುಪತ್ಯಗಾರಿಕೆ ಬಹಳ ಸರಳ, ಆದರೂ ಕೂಡ ಸಂಕೀರ್ಣವಾದದ್ದು. ಅದ್ದರಿಂದ ಇದನ್ನು ತಪ್ಪಾಗಿ ಗ್ರಹಿಸಲು ಬಹಳ ಸುಲಭ. ಆದರೂ ಕೂಡ ಇದರ ಕಾರ್ಯರೂಪವಿಲ್ಲದೆ ಕ್ರೈಸ್ತರು ಮತ್ತು ಸಭೆಯು ಉಳಿಯಲು ಸಾಧ್ಯವಿಲ್ಲ. ಒಳ್ಳೆಯ ಕ್ರೈಸ್ತವನಾಗಬೇಕಾದರೆ ಒಳ್ಳೆಯ ಪಾರುಪತ್ಯಗಾರನಾಗಬೇಕು.

ಇಂದೊಂದು ಸಿದ್ಧಾಂತ ಅಥವಾ ತತ್ವಜ್ಞಾನವಲ್ಲ ಬದಲಿಗೆ ಇದೊಂದು ಕ್ರಿಯಾರೂಪದ ಕಾರ್ಯಕ್ರಮ. ಇದು ಕ್ರೈಸ್ತರು ಜೀವಿಸುವ ವಿಧಾನ.... ಇದು ಕ್ರೈಸ್ತರ ಜೀವನಕ್ಕೆ ನಿಜವಾದ,ಅಗತ್ಯವಾದ ಮತ್ತು ಮುಖ್ಯವಾದ ಕ್ರಿಯೆಯಾಗಿದೆ. ಇದು ಕೇವಲ ಮಾನಸಿಕ ಅನುಮತಿಯಲ್ಲ. ಬದಲಿಗೆ ಇದು ಮನಃಪೂರ್ವಕವಾಗಿ ಮಾಡುವ ಕ್ರಿಯೆ ಮತ್ತು ನಿರ್ಧಿಷ್ಟವಾದ ಹಾಗೂ ಜೀವನದ ಬಹು ಮುಖ್ಯ ನಿರ್ಧಾರಗಳನ್ನು ಮುಟ್ಟುವ ನಿರ್ಣಾಯಕ ವ್ಯವಹಾರವಾಗಿದೆ.

ಕ್ರೈಸ್ತಿಯ ಪಾರುಪತ್ಯಗಾರನ ಮುಖ್ಯವಾದ ತತ್ವಗಳು ಯಾವುವು? ಈ ವಾರ ನಾವು ಪಾರುಪತ್ಯಗಾರಿಕೆಯು ಕ್ರೈಸ್ತಿಯ ಜೀವನದಲ್ಲಿ ವಹಿಸುವ ಪಾತ್ರಗಳು ಏನು ಎಂಬುದಾಗಿ ತಿಳಿದುಕೊಳ್ಳೋಣ. ಇದನ್ನು ನಾವು ಸಾದೃಶ್ಯದ ನಕ್ಷೆ ಚಕ್ರದ ಮೂಲಕ

ಅರ್ಥಮಾಡಿಕೊಳ್ಳೋಣ.

**ಪಾಠ 10** **ಮಾರ್ಚ್ 3-9**

**ಭಾನುವಾರ** **ಮಾರ್ಚ್ 4**

## ಕ್ರೈಸ್ತ ಕೇಂದ್ರಿತ ತತ್ವಾಧಾರಿತ ನಂಬಿಕೆಗಳು

ಇಡೀ ಸತ್ಯವೇದದಲ್ಲಿ ಕ್ರಿಸ್ತನು ಕೇಂದ್ರ ಬಿಂದುವಾಗಿದ್ದಾನೆ. (ಯೋಹಾನ 5:39), ನಾವು ಆತನ ಜೊತೆಯಲ್ಲಿರುವ ಸಂಬಂಧದಲ್ಲಿ ನಮ್ಮನ್ನು ನಾವು ನೋಡಿಕೊಳ್ಳಬೇಕಿದೆ. ಆತನು ಪಾಪದ ದಂಡನೆಯನ್ನು ಸಲ್ಲಿಸಿದ್ದಾನೆ. 'ಅನೇಕರನ್ನು ಬಿಡಿಸಿಕೊಳ್ಳುವುದಕ್ಕಾಗಿ' (ಮಾರ್ಕ 10:45). ಯೇಸುವು ಪರಲೋಕದಲ್ಲಿ ಮತ್ತು ಭೂಲೋಕದಲ್ಲಿ ಎಲ್ಲಾ ಅಧಿಕಾರಗಳನ್ನು ಹೊಂದಿದ್ದಾನೆ. (ಮತ್ತಾಯ 28:18), ಮತ್ತು ಎಲ್ಲಾ ವಸ್ತುಗಳು ಆತನ ಕೈ ಕೆಳಗೆ ಕೆಲಸ ಮಾಡುತ್ತವೆ (ಯೋಹಾನ 13:3) ಎಲ್ಲಾ ನಾಮಗಳಿಗಿಂತ ಆತನ ನಾಮವು ಶ್ರೇಷ್ಠವಾಗಿದೆ, ಮತ್ತು ಒಂದು ಎಲ್ಲಾ ಮೊಣಕಾಲುಗಳು ಆತನ ಹೆಸರಿನಲ್ಲಿ ಅಡ್ಡಬೀಳಬೇಕು. (ಫಿಲಿಪ್ಪಿಯವರಿಗೆ 2:9-11).

ಯೇಸುವು ಎಲ್ಲಾ ಜೀವಿಗಳ ಕೇಂದ್ರಬಿಂದುವಾಗಿದ್ದಾನೆ **ಎಲೆನ್ ಜಿ ವೈಟ್ ಎವಂಜಲಿಸ್ಮ್ ಪುಟ 186**.

ಕ್ರಿಸ್ತನು ಪಾರುಪತ್ಯಗಾರಿಕೆಯ ಹೃದಯವಾಗಿದ್ದಾನೆ ಮತ್ತು ನಮ್ಮ ಶಕ್ತಿಯ ಮೂಲವಾಗಿದ್ದಾನೆ. ಆತನಿಂದಲೇ ನಾವು ಅರ್ಥಪೂರ್ಣವಾದ ಜೀವನವನ್ನು ಜೀವಿಸುತ್ತೇವೆ, ನಮ್ಮ ಜೀವನದ ಕೇಂದ್ರ ಬಿಂದುವು ಅತನಾಗಿದ್ದಾನೆ ಎಂದು ಎಲ್ಲರಿಗೂ ತೋರಿಸುತ್ತೇವೆ.ಪೌಲನು ಅನೇಕ ಶೋಧನೆಗಳನ್ನು ಎದುರಿಸಿರಬಹುದು, ಆದರೆ ಆತನು ಎಲ್ಲಿದ್ದರೂ ಅಥವಾ ಆತನಿಗೆ ಏನಾದರೂ ಕೂಡ ಆತನ ಜೀವನದಲ್ಲಿ ಒಂದು ಮುಖ್ಯವಾದ ಅದ್ಯತೆಯಿತ್ತು 'ನನಗಂತೂ ಬದುಕುವುದೆಂದರೆ ಕ್ರಿಸ್ತನೇ, ಸಾಯುವದು ಲಾಭವೇ.' (ಫಿಲಿಪ್ಪಿಯವರಿಗೆ 1:21).

ಕೊಲೊಸ್ಸೆ 1:16-18 ಮತ್ತು ರೋಮ 8:21 ಹಾಗೂ 2 ಕೊರಿಂಥ 5:17 ನ್ನು ಓದಿರಿ ನಮಗೆ ಸಂಬಂದಿಸಿದ ಎಲ್ಲಾ ವಿಷಯಗಳಿಗೂ ಯೇಸುವು ಹೇಗೆ ಕೇಂದ್ರಬಿಂದುವಾಗಿದ್ದಾನೆ.



---

---

ಕ್ರಿಸ್ತನು ನಮ್ಮ ಕೇಂದ್ರಬಿಂದುವಾಗದೆ ಪ್ರಾಮಾಣಿಕವಾದ ಪಾರುಪತ್ಯಗಾರಿಕೆ ಎಂಬುದು ಸಾಧ್ಯವಿಲ್ಲ. (ಗಲಾತ್ಯ 2:20). ಆ 'ಭಾಗ್ಯಕರವಾದ ನಿರೀಕ್ಷೆಗೆ' ಆತನೇ ಕೇಂದ್ರಬಿಂದುವಾಗಿದ್ದಾನೆ. (ತೀತನಿಗೆ 2;13) ಮತ್ತು 'ಆತನು ಎಲ್ಲಕ್ಕೂ ಮೊದಲು ಇದ್ದವನು ಆತನು ಸಮಸ್ತಕ್ಕೂ ಅಧಾರಭೂತನು.' (ಕೊಲೊಸ್ಸೆ 1:17) ಹೇಗೆ ಅಚ್ಚು ಚಕ್ರಕ್ಕೆ ಕೇಂದ್ರ ವಾಗಿರುತ್ತದೋ ಮತ್ತು ಇಡೀ ಚಕ್ರದ ಭಾರವನ್ನು ಅದು ಹೊರುತ್ತದೆ, ಹಾಗೆಯೇ ಕ್ರಿಸ್ತನು ಪಾರುಪತ್ಯಗಾರಿಕೆ ಜೀವನದ ಕೇಂದ್ರವಾಗಿದ್ದಾನೆ. ಹೇಗೆ ಶಕ್ತಿಶಾಲಿಯಾದ ಅಚ್ಚು ಹೇಗೆ ಸ್ಥಿರತೆಯನ್ನು ನೀಡುತ್ತಾ ಚಕ್ರಗಳು ತಿರುಗುವಂತೆ ಸಹಾಯ ಮಾಡುತ್ತದೋ ಹಾಗೆಯೆ ಕ್ರಿಸ್ತನು ನಮ್ಮ ಕ್ರೈಸ್ತಿಯ ಜೀವನದ ಸ್ಥಿರವಾದ ಕೇಂದ್ರವಾಗಿದ್ದಾನೆ. (ಇಬ್ರಿಯರಿಗೆ 13:8). ನಾವು ಮಾಡುವ ಮತ್ತು ಆಲೋಚಿಸುವ ಎಲ್ಲವೂ ಕೂಡ ಆತನಿಂದ ಪ್ರೇರಣೆಯನ್ನು ಪಡೆಯಬೇಕು.ಪಾರುಪತ್ಯಗಾರಿಕೆಯ ಎಲ್ಲಾ ವಿಷಯಗಳು ಕೂಡ ಆತನು ಕೇಂದ್ರವಾಗಿದ್ದು ನಡೆಸಬೇಕು.

'ನನ್ನನ್ನು ಬಿಟ್ಟು ನೀವು ಏನೂ ಮಾಡಲಾರಿರಿ' (ಯೋಹಾನ 15:5) ಪಾರುಪತ್ಯಗಾರಿಕೆಯ ಕೇಂದ್ರ ಕೇವಲ ಖಾಲಿಯಾದ ಸ್ಥಳವಲ್ಲ ಬದಲಿಗೆ ಅದು ಸಜೀವ ಕ್ರಿಸ್ತನ ಸಾದೃಶ್ಯವಾಗಿದೆ. ಆತನು ನಮ್ಮಲ್ಲಿ ಕ್ರಿಯೆಯನ್ನು ಮಾಡುತ್ತಾ ಇಂದಿಗೂ ಮತ್ತು ನಿತ್ಯತ್ವಕ್ಕೂ ನಮ್ಮನ್ನು ಸಿದ್ದಪಡಿಸುತ್ತಿದ್ದಾನೆ.

ಕ್ರಿಸ್ತನು ನಮ್ಮ ಜೀವನದ ಕೇಂದ್ರವಾಗಿದ್ದಾನೆ ಎಂದು ಹೇಳುವುದು ಒಂದು ಆದರೆ ಆತನ ಹಾಗೆ ಜೀವಿಸುವುದು ಮತ್ತೊಂದು ಮುಖ್ಯವಾದ ವಿಷಯ. ಕ್ರಿಸ್ತನು ನಿಮ್ಮಲ್ಲಿ ಜೀವಿಸುತ್ತಿದ್ದಾನೆ ಎಂದು ನೀವು ಹೇಗೆ ಹೇಳುವಿರಿ ಆತನು ವಾಗ್ದಾನ ಮಾಡಿರುವ ಹಾಗೆ ಆತನಿಗೆ ನೀವು ಅವಕಾಶಮಾಡಿಕೊಟ್ಟರೆ ಆತನು ನಿಮ್ಮಲ್ಲಿ ಬಂದುವಾಸಿಸುವನು ಎಂಬ ವಾಗ್ದಾನವನ್ನು ನೀವು ಹೇಗೆ ನಂಬುವಿರಿ?

**ಪಾಠ 10** **ಮಾರ್ಚ್ 3–9**

**ಸೋಮವಾರ** **ಮಾರ್ಚ್ 5**

## ಗುಡಾರದ ಸಿದ್ಧಾಂತ

ಪಾರುಪತ್ಯಗಾರಿಕೆಯ ಹಿನ್ನಲೆಯಲ್ಲಿ ಗುಡಾರದ ಸೇವೆಯ ಕುರಿತಾಗಿ ಯಾರೂ ಕೂಡ ಆಲೋಚಿಸುವುದಿಲ್ಲ. ಅದರೂ ಇವರೆಡರ ನಡುವೆ ಸಂಬಂಧವಿದೆ ಯಾಕೆಂದರೆ ಗುಡಾರದ ಸೇವೆಯ ಸಿದ್ಧಾಂತ ನಮ್ಮ ನಂಬಿಕೆಗೆ ಬಹಳ ಪ್ರಮುಖವಾದ ಸಿದ್ಧಾಂತವಾಗಿದೆ, ಮತ್ತು ಪಾರುಪತ್ಯಗಾರಿಕೆಯು ನಮ್ಮ ನಂಬಿಕೆಯ ಸಿದ್ಧಾಂತದ ಒಂದು ಭಾಗವಾಗಿದೆ. 'ಕ್ರಿಸ್ತನು ನಮ್ಮ ಪರವಾಗಿ ಪರಲೋಕದ ಗುಡಾರದಲ್ಲಿ ಮಾಡುತ್ತಿರುವ ಮದ್ಯಸ್ಥಿಕೆಯ ಸೇವೆಯ ಸರಿಯಾದ ಅರ್ಥವೂ ನಮ್ಮ ರಕ್ಷಣೆಗೆ ಬಹಳ ಪ್ರಾಮುಖ್ಯವಾದದ್ದು.' **ಎಲೆನ್ ಜಿ ವೈಟ್ ಎವಂಜೆಲಿಸ್ಮ್ ಪುಟ 221**. ಪಾರುಪತ್ಯಗಾರಿಕೆಯ ಪಾತ್ರವನ್ನು ಸತ್ಯವೇದದ ಪರಿಕಲ್ಪನೆಯಲ್ಲಿ ಅರ್ಥ ಮಾಡಿಕೊಳ್ಳುವುದು ಅನಿವಾರ್ಯವಾಗಿದೆ.

1 ಅರಸುಗಳು 7:33 ಒಂದು ರಥದ ಚಕ್ರವನ್ನು ವಿವರಿಸುತ್ತದೆ. ಗುಡಾರದ ಸೇವೆಯ ಸಿದ್ಧಾಂತವನ್ನು ಚಕ್ರದ ಕೇಂದ್ರ ಎಂದು ಉದಾಹರಿಸೋಣ. ಕೇಂದ್ರವು ಅಚ್ಚಿಗೆ ಅಂಟಿಕೊಂಡು ಇರುತ್ತದೆ ಮತ್ತು ಚಕ್ರವು ತಿರುಗುವಾಗ ಅದಕ್ಕೆ ಸ್ಥಿರತೆಯನ್ನು ನೀಡುತ್ತದೆ. ಮರಣ ಮತ್ತು ಜಯದ ಪುನರುತ್ಥಾನವನ್ನು ಅನುಭವಿಸಿ (1 ತಿಮೋಥಿ 1:10), ಕ್ರಿಸ್ತನು ತನ್ನ ಮರಣದ ಆಧಾರದ ಮೇಲೆ ಪರಲೋಕದ ಗುಡಾರದಲ್ಲಿ ಸೇವೆ ಸಲ್ಲಿಸುತ್ತಿದ್ದಾನೆ. (ಇಬ್ರಿಯರಿಗೆ 6:19, 20) ಮತ್ತು ನಮ್ಮ ನಂಬಿಕೆಗೆ ಸ್ಥಿರತೆಯನ್ನು ತರುತ್ತಿದ್ದಾನೆ. ಪರಲೋಕದ ಗುಡಾರದಿಂದ ಈ ಲೋಕದಲ್ಲಿ ಆತನು ನಮ್ಮ ಪರವಾಗಿ ಸೇವೆ ಸಲ್ಲಿಸುತ್ತಾನೆ. (ಇಬ್ರಿಯರಿಗೆ 8:1,2 ನೋಡಿರಿ).

ಸತ್ಯವೇದ ಒಂದೇ ಎಂಬ ನಿಯಮದ ಅಡಿಯಲ್ಲಿ ನಿಂತು ಸತ್ಯವೇದ ಆಧಾರಿತವಾದ ಅಡ್ವೆಂಟಿಸ್ಟ್ ಸಿದ್ಧಾಂತವು ಪಾರುಪುತ್ಯಗಾರಿಕೆಯ ಸಾಮಾನ್ಯ ಸಿದ್ಧಾಂತದ ಮೇಲೆ ನಮ್ಮ ಸಿದ್ಧಾಂತವನ್ನು ಕಟ್ಟಲಾಗಿದೆ.

ಈ ಕೆಳಗಿನ ವಚನಗಳು ಯೇಸುವು ನಮಗಾಗಿ ಪರಲೋಕದ ಗುಡಾರದಲ್ಲಿ



ಸಲ್ಲಿಸುತ್ತಿರುವ ಸೇವೆಯ ಕುರಿತಾಗಿ ಏನು ಹೇಳುತ್ತವೆ? 1 ಯೋಹಾನ 2:1, ಇಬ್ರಿಯರಿಗೆ 4:14–16, ಪ್ರಕಟಣೆ 14:7.

---

ಗುಡಾರದ ಸೇವೆಯು ನಮಗೆ ರಕ್ಷಣೆ ಮತ್ತು ವಿಮೋಚನೆಯ ವಿಷಯವನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಇದು ಎಲ್ಲಾ ಕ್ರೈಸ್ತಿಯ ಸಿದ್ಧಾಂತಗಳ ಕೇಂದ್ರಬಿಂದುವಾಗಿದೆ. ಗುಡಾರದ ಸೇವೆಯಲ್ಲಿ ನಮಗಾಗಿ ಕ್ರಿಸ್ತನ ಮರಣವನ್ನು ಮಾತ್ರ ನೋಡುವುದಿಲ್ಲ, ಬದಲಿಗೆ ಪರಲೋಕದಲ್ಲಿ ಆತನು ನಮಗಾಗಿ ಮಾಡುತ್ತಿರುವ ಸೇವೆಯನ್ನು ನೋಡುತ್ತೇವೆ. ಅತೀ ಪರಿಶುದ್ದ ಸ್ಥಳದಲ್ಲಿ ದೇವರ ಆಜ್ಞೆಗಳನ್ನು ಮತ್ತು ಕೊನೆಯ ನ್ಯಾಯತೀರ್ಪಿನ ಪ್ರಾಮುಖ್ಯತೆಯನ್ನು ನೋಡಬಹುದು. ಕ್ರಿಸ್ತನು ಚೆಲ್ಲಿದ ರಕ್ತದ ಮೂಲಕ ವಿಮೋಚನೆಯು ಸಾಕ್ಷಾತ್ಕಾರವನ್ನು ಅನುಭವಿಸುವಂತಾಯಿತು.

ಪಾರುಪತ್ಯಗಾರಿಕೆಯ ಪಾತ್ರವು ರಕ್ಷಣೆಯ ಸಿದ್ಧಾಂತದಲ್ಲಿ ಲಂಗರುಹಾಕಿದ್ದು ಅದನ್ನು ಗುಡಾರದ ಸೇವೆಯಲ್ಲಿ ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ. ಕ್ರಿಸ್ತನು ನಮಗಾಗಿ ಏನು ಮಾಡಿದ್ದಾನೆ ಮತ್ತು ಏನು ಮಾಡುತ್ತಿದ್ದಾನೆ ಎಂಬುದನ್ನು ಹೆಚ್ಚಾಗಿ ಅರ್ಥ ಮಾಡಿಕೊಂಡ ಹಾಗೆ ನಾವು ಕ್ರಿಸ್ತನ ಹತ್ತಿರಕ್ಕೆ ಬರುವುವರಾಗಿದ್ದೇವೆ. ಆತನ ಸೇವೆ ಆತನ ಕೆಲಸ, ಆತನ ಬೋಧನೆ ಮತ್ತು ಪಾರುಪತ್ಯಗಾರಿಕೆಯನ್ನು ತಮ್ಮ ಜೀವನದ ದ್ಯೇಯವಾಗಿ ಇಟ್ಟುಕೊಂಡಿರುವವರ ಜೀವನದಲ್ಲಿ ಆತನು ನೆರವೇರಿಸಲು ಉದ್ದೇಶಿಸಿರುವ ಆಲೋಚನೆಗಳನ್ನು ಕಾಣಬಹುದು.

ಇಬ್ರಿಯರಿಗೆ 4:14–16, ನ್ನ ಓದಿರಿ ಪಾಪ, ನಾನತ್ವ ಮತ್ತು ಸ್ವಾರ್ಥದ ಜೊತೆಯಲ್ಲಿ ನಾವು ನಡೆಸುತ್ತಿರುವ ಹೋರಾಟದಲ್ಲಿ ನಮಗೆ ಏನು ಸಿಗುತ್ತದೆ? ಅಲ್ಲಿರುವ ವಾಗ್ದಾನಗಳಿಂದ ನಾವು ಯಾವ ರೀತಿಯ ನಿರೀಕ್ಷೆಯನ್ನು ಪಡೆಯಬಹುದು?

**ಪಾಠ 10** **ಮಾರ್ಚ್ 3–9**

**ಮಂಗಳವಾರ** **ಮಾರ್ಚ್ 6**

## ಕ್ರಿಸ್ತನ ಕೇಂದ್ರಿತವಾದ ಸೈದಾಂತಿಕ ನಂಬಿಕೆಗಳು

ಗುಡಾರದ ಸೇವೆಯು ಬಹಳ ಪ್ರಾಮುಖ್ಯವಾದದ್ದು ಯಾಕೆಂದರೆ ಇಲ್ಲಿ ನಮ್ಮ ರಕ್ಷಣೆಯನ್ನು ಸ್ಪಷ್ಟವಾಗಿ ವಿವರಿಸಲಾಗಿದೆ. ಇದರಲ್ಲಿ ಶಿಲುಬೆಯ ಅರ್ಥವನ್ನು ತಿಳಿಸಲಾಗಿದೆ. ನಮ್ಮ ಎಲ್ಲಾ ಸಿದ್ಧಾಂತಗಳು ಒಂದಲ್ಲ ಒಂದು ರೀತಿಯಲ್ಲಿ ಸುವಾರ್ತೆಯ ವಾಗ್ದಾನಕ್ಕೆ ಮತ್ತು ರಕ್ಷಣೆಗೆ ಜೋಡಿಸಬೇಕಾಗುತ್ತದೆ. ಚಕ್ರದ ಕಡ್ಡಿಗಳ ಹಾಗೆಯೇ ಯೇಸುವಿನಲ್ಲಿ ನಾವಿಟ್ಟಿರುವ ನಂಬಿಕೆಯಿಂದಲೇ ರಕ್ಷಣೆ ಎಂಬ ಶ್ರೇಷ್ಠವಾದ ಸತ್ಯದ ಸುತ್ತಲೂ ಇರಬೇಕು.

'ನಮ್ಮ ಪಾಪದ ನಿಮಿತ್ತ ಕ್ರಿಸ್ತನು ಮಾಡಿದ ತ್ಯಾಗದ ಸಮಾಧಾನ ಬಲಿಯ ಕುರಿತಾದ ಸತ್ಯದ ಸುತ್ತಲೂ ಇತರ ಎಲ್ಲಾವುಗಳನ್ನು ನಾವು ಜೋಡಿಸಬಹುದು.... ಯಾರು ಕ್ರಿಸ್ತನ ಶ್ರೇಷ್ಠವಾದ ತ್ಯಾಗದ ಕುರಿತಾಗಿ ಕಲಿಯುವರೋ ಅವರು ಕೃಪೆ ಮತ್ತು ಜ್ಞಾನದಲ್ಲಿ ಬೆಳೆಯುತ್ತಾರೆ.' **ಎಲೆನ್ ಜಿ ವೈಟ್ ದಿ ಎಸ್ ಡಿ ಎ ಬೈಬಲ್ ಕಾಮೆಂಟರಿ ಸಂಪುಟ 5, ಪುಟ 1137**.

ಯೋಹಾನ 14:6 ರಲ್ಲಿ ತನ್ನನ್ನು ತಾನು 'ಸತ್ಯ' ಎಂದು ಯೇಸುವು ಹೇಳಿಕೊಳ್ಳುವುದರ ಹಿಂದಿನ ಅರ್ಥವೇನು? ಇದನ್ನು ಯೋಹಾನ 17:17 ಜೊತೆಗೆ ಹೋಲಿಸಿರಿ. ಸತ್ಯದ ಜೊತೆ ನಾವು ಏನು ಮಾಡಬಹುದು? 3 ಯೋಹಾನ 3.

---

---

ನಾವು ಯಾರು ಮತ್ತು ನಾವು ಯಾವ ದಿಕ್ಕಿನಲ್ಲಿ ಸಾಗುತ್ತಿದ್ದೇವೆ ಎಂಬುದನ್ನು ನಮ್ಮ ಸಿದ್ಧಾಂತಗಳು ನಿರ್ಧರಿಸುತ್ತವೆ. ಸಿದ್ಧಾಂತಗಳು ಕೇವಲ ತತ್ವಜ್ಞಾನದ ಸಂಗ್ರಹವಲ್ಲ. ಎಲ್ಲಾ ನಿಜವಾದ ಸಿದ್ಧಾಂತಗಳು ಕ್ರಿಸ್ತನಲ್ಲಿ ಲಂಗರು ಹಾಕಿಕೊಂಡಿವೆ, ಇವೆಲ್ಲವೂ ಕೂಡ ನಮ್ಮ ಜೀವನಗಳನ್ನು ಯಾವುದೋ ಒಂದು ರೀತಿಯಲ್ಲಿ



ಪ್ರೇರಣೆಗೊಳಿಸಬೇಕು.ಸೇವೆಂತ್ ಡೇ ಅಡ್ವೆಂಟಿಸ್ಟ್ ರಾಗಿ ನಮ್ಮ ಜೀವನಗಳು ಬೇರೆ ಎಲ್ಲಾ ವಿಷಯಗಳಿಗಿಂತ ನಮ್ಮ ಸಿದ್ಧಾಂತಗಳ ಬೋಧನೆಗಳ ಮೇಲೆ ಆಧಾರವಾಗಿದೆ. ಸತ್ಯವೇದದಿಂದ ನಾವು ತೆಗೆದುಕೊಂಡಿರುವ ಸಿದ್ಧಾಂತಗಳು ಸೇವೆಂತ್ ಡೇ ಅಡ್ವೆಂಟಿಸ್ಟ್ ರಾಗಿ ನಾವು ಯಾರು ಎಂದು ತೋರಿಸುತ್ತದೆ.

ಸಿದ್ಧಾಂತಗಳ ಸತ್ಯವನ್ನು ಯೇಸುವಿನಲ್ಲಿ ನಾವು ಕಾಣುವ ಹಾಗೆ ಜೀವಿಸುವುದು ಮತ್ತು ಅದನ್ನು ಸಕಾರಾತ್ಮಕವಾಗಿ ನಮ್ಮ ಜೀವನದಲ್ಲಿ ತೋರಿಸುವುದರಿಂದ ನಮ್ಮ ಜೀವನದ ಗುಣಮಟ್ಟವನ್ನು ಹೆಚ್ಚಿಸುವುದೇ ಪಾರುಪತ್ಯಗಾರಿಕೆಯ ಪಾತ್ರವಾಗಿದೆ. 'ಆತನನ್ನೇ ಕೇಳಿದಿರಲ್ಲಾ ಆತನಲ್ಲಿಯೇ ಉಪದೇಶವನ್ನು ಹೊಂದಿದರಲ್ಲಾ ಯೇಸುವಿನಲ್ಲಿರುವ ಸತ್ಯೋಪದೇಶವು ಯಾವದಂದರೆ ನೀವು ನಿಮ್ಮ ಹಿಂದಿನ ನಡತೆಯನ್ನು ಅನುಸರಿಸದೆ ಪೂರ್ವ ಸ್ವಭಾವವನ್ನು ತೆಗೆದುಹಾಕಿಬಿಡಬೇಕು. ಅದು ಮೋಸಕರವಾದ ದುರಾಷೆಗಳಿಂದ ಕೆಟ್ಟುಹೋಗುವಂಥದು. ನೀವು ನಿಮ್ಮ ಅಂತರ್ಯದಲ್ಲಿ ಹೊಸಬರಾಗಿ ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ. ಆ ಸ್ವಭಾವವು ದೇವರ ಹೋಲಿಕೆಯ ಮೇರೆಗೆ ಸತ್ಯಾನುಗುಣವಾದ ನೀತಿಯುಳ್ಳದ್ದಾಗಿಯೂ ದೇವ ಭಯವುಳ್ಳದ್ದಾಗಿಯೂ ನಿರ್ಮಿಸಲ್ಪಟ್ಟಿದೆ.? (ಎಫೆಸ 4:21–24).

ಈ ವಚನಗಳಲ್ಲಿ ಸತ್ಯವನ್ನು ತಿಳಿಯುವುದು ಮಾತ್ರವಲ್ಲ ಅದನ್ನು ಅನುಸರಿಸಿ ನಡೆದುಕೊಳ್ಳುವುದರ ಪ್ರಾಮುಖ್ಯತೆಯನ್ನು ನೋಡುತ್ತೇವೆ. ಪಾರುಪತ್ಯಗಾರನಾಗಿ ಕೇವಲ ಸತ್ಯದ ಜ್ಞಾನವನ್ನು ಮಾತ್ರ ಹೊಂದಿದ್ದರೆ ಸಾಲದು ಅದಕ್ಕೆ ಸರಿಯಾಗಿ ನಾವು ಇತರರ ಒಳಿತಿಗಾಗಿ ಜೀವಿಸುವುದು ನಿಜವಾದ ಪಾರುಪತ್ಯಗಾರಿಕೆಯಾಗಿದೆ.

**ಪಾಠ 10** **ಮಾರ್ಚ್ 3–9**

**ಬುಧವಾರ** **ಮಾರ್ಚ್ 7**

## ಮೂರು ದೂತರ ಸಂದೇಶಗಳು

ಲೋಕದ ಮೇಲೆ ಬರಲಿರುವ ದುರಂತದ ಕುರಿತಾಗಿ ದೇವರು ಎರಡು ಬಾರಿ ಮಾತ್ರ ಎಚ್ಚರಿಸಿದ್ದಾನೆ ಮೊದಲು ನೋಹನಿಗೆ (ಆದಿಕಾಂಡ 6:13–18, ಮತ್ತಾಯ 24:37) ಮತ್ತು ಇನ್ನೊಂದು ಬಾರಿ ಮೂರು ದೂತರ ಸಂದೇಶದ ಮೂಲಕ (ಪ್ರಕಟಣೆ

14:6–12) ಪ್ರಪಂಚದ ಮೇಲೆ ನಡೆಯುವ ಕೊನೆಯ ಕಾಲದ ಘಟನೆಗಳ ಕುರಿತಾಗಿ ಈ ಸಂದೇಶಗಳು ಮುಚ್ಚಿರುವ ಪರದೆಯನ್ನು ತೆರೆಯುತ್ತವೆ. ಈ ಸಂದೇಶಗಳನ್ನು ನಾವು ಅರ್ಥಮಾಡಿಕೊಳ್ಳುವ ವಿಧಾನವು ಕಾಲದ ಜೊತೆಗೆ ಪ್ರೌಢಿಮೆಯನ್ನು ಪಡೆದುಕೊಂಡಿದೆ ಆದರೆ, ಅದರ ಸಂದೇಶ ಮತ್ತು ಉದ್ದೇಶಗಳು ಕ್ರಿಸ್ತನಲ್ಲಿರುವ ನಂಬಿಕೆಯಿಂದಲೇ ನೀತಿ ನಿರ್ಣಯವು ಮೂರನೇಯ ದೂತನ ಸಂದೇಶದ ಸತ್ಯವಾಗಿದೆ. **ಎಲೆನ್ ಜಿ ವೈಟ್, ಎವೆಂಜಿಲಿಸಮ್ ಪುಟ 190**. ಮತ್ತೊಂದು ಮಾತಿನಲ್ಲಿ ಹೇಳುವುದಾದರೆ ನಮ್ಮ ಸತ್ಯದ ಕೇಂದ್ರದಲ್ಲಿ ಲೋಕದ ಕಟ್ಟ ಕಡೆಯವರೆಗೆ ಸಾರಬೇಕಾದ ಸತ್ಯದಲ್ಲಿ ಕ್ರಿಸ್ತನು ನಮ್ಮ ಶ್ರೇಷ್ಠವಾದ ತ್ಯಾಗವಾಗಿ ನಿಲ್ಲುತ್ತಾನೆ.

ಪ್ರಕಟಣೆ 14:6–12 ನ್ನು ಓದಿರಿ ಈ ಸಂದೇಶಗಳ ಸಾರಂಶವೇನು? ಅವು ಲೋಕಕ್ಕೆ ಏನು ಹೇಳುತ್ತವೆ? ಈ ಸಂದೇಶಗಳ ಕುರಿತಾಗಿ ನಮ್ಮ ಮೇಲಿರುವ ಜವಾಬ್ದಾರಿ ಏನು ಮತ್ತು ಪಾರುಪತ್ಯಗಾರಿಕೆಯು ಇಲ್ಲಿ ಹೇಗೆ ಜೋಡಣೆಯಾಗಿದೆ?

ಕ್ರಿಸ್ತನ ಎರಡನೇಯ ಬರೋಣಕ್ಕಾಗಿ ಲೋಕವನ್ನು ಸಿದ್ಧಪಡಿಸುವುದಕ್ಕಾಗಿ ಮೂರು ದೂತರ ಸಂದೇಶವನ್ನು ಸಾರುವುದು ಸೇವೆಂತ್ ಡೇ ಅಡ್ವೆಂಟಿಸ್ಟ್ ರಾಗಿ ನಮ್ಮ ಕೆಲಸವಾಗಿದೆ. ನಿತ್ಯತ್ವದ ಕುರಿತಾಗಿ ಜನರು ತೀರ್ಮಾನ ಮಾಡಬೇಕಾಗಿದೆ. ದೇವರ ಕೆಲಸದಲ್ಲಿ ಸಹಭಾಗಿತ್ವದಲ್ಲಿ ಪಾಲ್ಗೊಳ್ಳುವುದೇ ಪಾರುಪತ್ಯಗಾರಿಕೆಯಾಗಿದೆ. (2 ಕೊರಿಂಥ 5:20, 6:1–4).

'ಸೇವೆಂತ್ ಡೇ ಅಡ್ವೆಂಟಿಸ್ಟ್ ರನ್ನು ದೇವರು ಲೋಕಕ್ಕೆ ಕಾವಲುಗಾರರಾಗಿ ಮತ್ತು ಬೆಳಕನ್ನು ಹೊರುವವರಾಗಿ ನಿಯಮಿಸಿದ್ದಾನೆ. ನಾಶವಾಗುವ ಲೋಕಕ್ಕೆ ತಿಳಿಸಬೇಕಾಗಿರುವ ಕೊನೆಯ ಸಂದೇಶದ ಜವಬ್ದಾರಿಯನ್ನು ಹೊರಿಸಲಾಗಿದೆ. ದೇವರ ವಾಕ್ಯದಿಂದ ಬರುವ ಪ್ರಕಾಶಮಾನವಾದ ಬೆಳಕು ಅವರ ಮೇಲೆ ಇದೆ. ಬಹಳ ಮುಖ್ಯವಾದ ಮೊದಲನೇಯ, ಎರಡನೇಯ, ಮತ್ತು ಮೂರನೇಯ ದೂತರ ಸಂದೇಶವನ್ನು ಅವರ ಮೇಲೆ ಹೊರಿಸಲಾಗಿದೆ. ಇದಕ್ಕಿಂತ ಹೆಚ್ಚಿನ



ಜವಾಬ್ದಾರಿಯುತವಾದ ಕೆಲಸ ಮತ್ತೊಂದಿಲ್ಲ. ಇದರಿಂದ ಅವರ ಏಕಾಗ್ರತೆಯನ್ನು ದೂರ ಮಾಡುವ ಯಾವ ಶೋಧನೆಯು ಕೂಡ ಅವರ ಜೀವನದಲ್ಲಿ ಇರಬಾರದು? **ಎಲೆನ್ ಜಿ ವೈಟ್ ಟೆಸ್ಟಿಮೊನಿಸ್ ಫಾರ್ ದಿ ಚರ್ಚ್ ಸಂಪುಟ 9, ಪುಟ 19**.

ಚಕ್ರದ ಕೇಂದ್ರವು ಭೂಮಿಯನ್ನು ತಾಕುವ ಸಮಯದಲ್ಲಿದ್ದೇವೆ ಮತ್ತು ಇದು ಮೂರು ದೂತರ ಸಂದೇಶದ ಉದ್ದೇಶವನ್ನು ತಿಳಿಸುವುದಾಗಿದೆ. ನಮ್ಮ ಕರ್ತವ್ಯವೆಂದರೆ ತತ್ವಜ್ಞಾನದ ತಪ್ಪು ಸಂದೇಶಗಳಿಂದ ಕಾಪಾಡಿಕೊಂಡು ಕೊನೆಯ ಕಾಲದಲ್ಲಿ ನಮ್ಮ ಜವಬ್ದಾರಿಯನ್ನು ವಹಿಸುವುದಾಗಿದೆ. ಈ ಸಂದೇಶದ ಪಾರುಪತ್ಯಗಾರರಾಗಿ ಮತ್ತು ಇದನ್ನು ಲೋಕಕ್ಕೆ ಸಾರುವ ಕೆಲಸವನ್ನು ನಾವು ಮಾಡಬೇಕು.

ಕೊನೆಯ ಕಾಲದ ಘಟನೆಗಳ ಕುರಿತಾಗಿ ಚಿತ್ರಪಟಗಳು ಮತ್ತು ದಿನಾಂಕಗಳ ನಡುವೆ ಸಿಕ್ಕಿ ಹಾಕಿಕೊಳ್ಳುವುದು ಬಹಳ ಸುಲಭ. ಆದರೆ ಈ ಸಂದೇಶವನ್ನು ಲೋಕಕ್ಕೆ ಸಾರುವುದರಿಂದ ಕ್ರಿಸ್ತನ ತ್ಯಾಗವನ್ನು ನಮ್ಮ ಸಂದೇಶದ ಕೇಂದ್ರಬಿಂದುವಾಗಿ ಇರಿಸುವುದು ಎಷ್ಟು ಪ್ರಾಮುಖ್ಯವಾದದ್ದು.

**ಪಾಠ 10** **ಮಾರ್ಚ್ 3–9**

**ಗುರುವಾರ** **ಮಾರ್ಚ್ 8**

## ಪಾರುಪತ್ಯಗಾರಿಕೆ

ಕ್ರಿಸ್ತನು ನಮ್ಮನ್ನು ಪರಿಶುದ್ಧವಾದ ಜೀವನ ನಡೆಸುವಂತೆ ಬಯಸುತ್ತಾನೆ. ಆತನ ಜೀವನ 'ಪರಿಶುದ್ದತೆಯನ್ನು' ತೋರಿಸುತ್ತದೆ ಮತ್ತು ಕೊನೆಗೆ ಪಾರುಪತ್ಯಗಾರನು ಹೇಗೆ ಕಾಣಬೇಕು ಎಂಬುದನ್ನು ತೋರಿಸುತ್ತದೆ (ಇಬ್ರಿಯರಿಗೆ 9:14). ದೇವರಿಗೆ ಇಷ್ಟವಾದ ರೀತಿಯಲ್ಲಿ ನಾವು ಜೀವಿಸಬೇಕು, ಇದರಲ್ಲಿ ನಮಗೆ ವಹಿಸಲಾಗಿರುವ ಎಲ್ಲವನ್ನೂ ನಾವು ಹೇಗೆ ನಿಭಾಯಿಸುತ್ತೇವೆ ಎಂಬುದು ಸೇರಿದೆ ಇದರಿಂದ ನಾವು ಪಾರುಪತ್ಯಗಾರಿಕೆಯ ಪರಿಶುದ್ದತೆಯನ್ನು ತೋರಿಸುತ್ತೇವೆ.

1 ಪೇತ್ರನು 1:15, 16 ನ್ನು ಇಬ್ರಿಯರಿಗೆ 12:14 ನ್ನು ಓದಿರಿ, 'ಪರಿಶುದ್ದವಾಗಿರುವುದು' ಮತ್ತು 'ಪರಿಶುದ್ದತೆ' ಎಂದರೆ ಏನು ಇವು ಪಾರುಪತ್ಯಗಾರಿಕೆಗೆ ಹೇಗೆ ಸಂಬಂಧಿಸಿವೆ

ಚಕ್ರದ ಸುತ್ತಲೂ ಒಂದು ಕಬ್ಬಿಣವನ್ನು ಜೋಡಿಸಿದರೆ ಚಕ್ರವು ಧೀರ್ಘಕಾಲ ಬಾಳಿಕೆಗೆ ಬರುತ್ತದೆ ಎಂದು ರೋಮನ್ನರು ಕಂಡುಹಿಡಿದರು. ನುರಿತ ಕೆಲಸಗಾರರು ಕಬ್ಬಿಣವನ್ನು ಸಾಕಷ್ಟು ಬಿಸಿ ಮಾಡಿ ಆ ಚಕ್ರದ ಮೇಲೆ ಇರಿಸಿದಾಗ ಅದು ಚಕ್ರದ ಮೇಲೆ ಸರಿಯಾಗಿ ಸೇರಿಕೊಳ್ಳುತ್ತಿತ್ತು. ಅದರ ಸುರಿಯುವ ತಣ್ಣನೆಯ ನೀರು ಅದನ್ನು ಗಟ್ಟಿಗೊಳಿಸುತ್ತಿತ್ತು. ಚಕ್ರವು ರಸ್ತೆಗೆ ಇಳಿದಾಗ ಕಬ್ಬಿಣವು ರಸ್ತೆಯನ್ನು ತಾಕುತ್ತಿತ್ತು.

ಚಕ್ರದ ಮೇಲೆ ಇರುವ ಕಬ್ಬಿಣವನ್ನು ನಾವು ಪಾರುಪತ್ಯಗಾರಿಕೆಗೆ ಹೋಲಿಸಬಹುದು. ನಮ್ಮ ಆತ್ಮೀಯ ಜೀವನವು ಪ್ರಾಯೋಗಿಕವಾದ ಜೀವನದ ಜೊತೆಯಲ್ಲಿ ಬೇರೆಯುವುದಾಗಿದೆ. ಇಲ್ಲಿಯೇ ನಮ್ಮ ನಂಬಿಕೆಯು ಜೀವನದ ಏಳು ಬೀಳುಗಳ ಜೊತೆಯಲ್ಲಿ ಗುರುತಿಸಿಕೊಂಡು ಸೋಲು ಮತ್ತು ಗೆಲುವುಗಳನ್ನು ಸಹಿಸಿಕೊಳ್ಳುತ್ತದೆ. ಇಲ್ಲಿ ಪ್ರತಿದಿನದ ಆಗುಹೋಗುಗಳ ನಡುವೆ ನಮ್ಮ ಜೀವನವು ಹೋರಾಟ ನಡೆಸುತ್ತದೆ. ಪಾರುಪತ್ಯಗಾರಿಕೆಯು ನಾವು ಯಾರು ಮತ್ತು ನಾವು ಏನು ಮಾಡುತ್ತೇವೆ ಎಂದು ತೋರಿಸುವ ವಿಧಾನವಾಗಿದೆ. ನಮ್ಮ ಜೀವನವನ್ನು ಸರಿಯಾಗಿ ನಿರ್ವಹಿಸುವ ಮತ್ತು ನಮ್ಮ ಸ್ವಭಾವವನ್ನು ತೋರಿಸುವ ಜೀವನ ಶೈಲಿಯಾಗಿದೆ. ಚಕ್ರದ ಕಬ್ಬಿಣವು ರಸ್ತೆಯನ್ನು ತಾಕಿದ ಹಾಗೆ ಪಾರುಪತ್ಯಗಾರಿಕೆಯು ಕ್ರಿಸ್ತನ ಜೊತೆಯಲ್ಲಿರುವ ನಮ್ಮ ಸಂಬಂಧವನ್ನು ತೋರಿಸುತ್ತದೆ.

ಕ್ರಿಯೆಗಳು ಶಕ್ತಿಶಾಲಿಯಾಗಿವೆ ಮತ್ತು ಅವುಗಳನ್ನು ಕ್ರಿಸ್ತನ ಜೊತೆ ನಮಗಿರುವ ಬದ್ದತೆಯ ಆಧಾರದ ಮೇಲೆ ನಾವು ನಿಯಂತ್ರಿಸಬೇಕು. ನಾವು ಈ ವಾಗ್ದಾನ ಮತ್ತು ಆಶಯದೊಂದಿಗೆ ಜೀವಿಸಬೇಕಾಗಿದೆ. 'ನನ್ನನ್ನು ಬಲಪಡಿಸುವಾತನಲ್ಲಿದ್ದು ಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ' (ಫಿಲಿಪ್ಪಿಯವರಿಗೆ 4:13).

ಪರಿಶುದ್ಧಾತ್ಮನು ನಮ್ಮಲ್ಲಿ ನಡೆಸುವ ಶುದ್ದತೆಯ ಕಾರ್ಯವು ಕ್ರಿಸ್ತನ ಸ್ವಭಾವವನ್ನು ಮಾನವರಲ್ಲಿ ಪ್ರತಿಬಿಂಬಿಸುವ ಕಾರ್ಯವಾಗಿದೆ. ಸುವಾರ್ತೆಯ ಧರ್ಮವು ಕ್ರಿಸ್ತನಲ್ಲಿರುವ ಜೀವನ ಮತ್ತು ನಿಯಮವಾಗಿದೆ. ಇದು ಕ್ರಿಸ್ತನ ಕೃಪೆಯನ್ನು ನಮ್ಮ ಸ್ವಭಾವದಲ್ಲಿ ಮತ್ತು ಒಳ್ಳೆಯ ಕ್ರಿಯೆಗಳಿಂದ ಅದನ್ನು ತೋರ್ಪಡಿಸುವುದಾಗಿದೆ. ಪ್ರಾಯೋಗಿಕವಾದ ಅನುದಿನದ ಜೀವನದಿಂದ ಸುವಾರ್ತೆಯನ್ನು ಬೇರ್ಪಡಿಸಲು ಸಾದ್ಯವಿಲ್ಲ. ಕ್ರೈಸ್ತರ ಜೀವನದ ಪ್ರತಿಯೊಂದು ಭಾಗವು ಕೂಡ ಕ್ರಿಸ್ತನ ಗುಣಲಕ್ಷಣಗಳನ್ನು ಪ್ರದರ್ಶಿಸುವುದಾಗಿದೆ. **ಎಲೆನ್ ಜಿ ವೈಟ್, ಕ್ರೈಸ್ಟ್ ಆಬ್ಜೆಕ್ಟ್ ಲೆಸೆನ್ಸ್, ಪುಟ 384**.



ನಿಮ್ಮ ಅನುದಿನ ಜೀವನವನ್ನು ನೋಡಿರಿ, ನಿಮ್ಮ ಪ್ರತಿದಿನದ ಉಳಿವುವಿಕೆ. ಅದು ನಿಮ್ಮಲ್ಲಿರುವ ಕ್ರಿಸ್ತನ ವಾಸ್ತವತೆಯನ್ನು ಹೇಗೆ ತೋರಿಸುತ್ತದೆ, ಇದರಿಂದ ನೀವು ಹೇಗೆ ನಿಮ್ಮ ಆಲೋಚನೆಯನ್ನು ನವಿಕರಿಸಿಕೊಳ್ಳುವಿರಿ?ಆತನ ಪರಿಶುದ್ದತೆಯು ನಿಮ್ಮಲ್ಲಿ ಕಾಣಿಸುವ ವಿಧಾನದಲ್ಲಿ ನೀವು ನಿಮ್ಮ ಜೀವನದಲ್ಲಿ ಯಾವ ಬದಲಾವಣೆಗಳನ್ನು ತರಲು ಬಯಸುವಿರಿ.

**ಪಾಠ 10 ಪಾರುಪತ್ಯಗಾರಿಕೆ ಪಾತ್ರ** **ಮಾರ್ಚ್ 3–9**

**ಶುಕ್ರವಾರ** **ಮಾರ್ಚ್ 9**

## ಹೆಚ್ಚಿನ ಚಿಂತನೆ :

ಕೆಲವು ಸಮಯಗಳಲ್ಲಿ ಚಕ್ರದ ಮೇಲೆ ಕಬ್ಬಿಣದ ಅವಶ್ಯಕತೆಯಿರುತ್ತದೆ. ಯಾಕೆಂದರೆ ಕಬ್ಬಿಣವು ವಿಸ್ತರಿಸುತ್ತಾ ಹೋದಂತೆ ಅದು ಹಾಳಾಗುತ್ತದೆ, ಕಬ್ಬಿಣವನ್ನು ಚಕ್ರಕ್ಕೆ ಅಳವಡಿಸಲು ಕಬ್ಬಿಣವನ್ನು ಚೆನ್ನಾಗಿ ಹೊಡೆದು ಅನೇಕ ಬಾರಿ ಅದನ್ನು ಕಾಯಿಸಬೇಕಾಗಿತ್ತು. ಪರಿಶುದ್ದತೆಯಲ್ಲಿ ಪಾರುಪತ್ಯಗಾರಿಕೆಯು ಇದೆ ರೀತಿಯ ಪಾತ್ರವನ್ನು ವಹಿಸುತ್ತದೆ. ಜೀವನದ ಸಣ್ಣ ಮತ್ತು ದೊಡ್ಡ ಕೆಲಸಗಳಲ್ಲಿ ಕ್ರಿಸ್ತನ ಮನಸ್ಸನ್ನು ತೋರಿಸುವುದು, ಅದು ಕೆಲವು ಸಮಯಗಳಲ್ಲಿ ಕಷ್ಟವೆನಿಸಿದರೂ ಕೂಡ ನಿಜವಾದ ಪಾರುಪತ್ಯಗಾರಿಕೆಯಾಗಿದೆ. ಇದರಲ್ಲಿ ನಾವು ಹಣವನ್ನು ಉಪಯೋಗಿಸುವ ವಿಧಾನ, ಕುಟುಂಬದ ಸಂಭಂದಗಳು, ನಮ್ಮ ಉದ್ಯೋಗ, ಇವು ಹೆಸರಿಸುವುದಾದ ಕೆಲವು ವಿಷಯಗಳಾಗಿವೆ.ಕೆಲವು ಸಮಯಗಳಲ್ಲಿ ಇದನ್ನು ನಾವು ಕಠಿಣವಾದ ಕ್ರಿಯೆಗಳ ಮೂಲಕ ಕಲಿಯುತ್ತೇವೆ.

ಕಬ್ಬಿಣವನ್ನು ಬಗ್ಗಿಸುವುದು ಸುಲಭವಾದ ಕೆಲಸವಲ್ಲ. ಅದೇ ರೀತಿಯಲ್ಲಿ ಮಾನವನ ಸ್ವಭಾವವನ್ನು ಬಗ್ಗಿಸುವುದು ಬಹಳ ಕಷ್ಟವಾದ ಕೆಲಸ. ಪೇತ್ರನ ಅನುಭವವದ ಕುರಿತಾಗಿ ಆಲೋಚಿಸಿರಿ. ಅವನು ಯೇಸುವಿನ ಜೊತೆಯಲ್ಲಿ ಎಲ್ಲಾ ಕಡೆಯಲ್ಲೂ ಇದ್ದನು, ಆದರೆ ಅವನು ಕ್ರಿಸ್ತನ ತುಟಿಗಳಿಂದ ಈ ಮಾತುಗಳನ್ನು ಎದುರು ನೋಡಲಿಲ್ಲ.

'ನಿನ್ನ ನಂಬಿಕೆಯು ಕುಂದಿಹೋಗಬಾರದೆಂದು ನಾನು ನಿನ್ನ ವಿಷಯದಲ್ಲಿ ವಿಜ್ಞಾಪಣೆ ಮಾಡಿಕೊಂಡೆನು.'(ಲೂಕ 22:32). ಯೇಸುವಿನ ಕುರಿತಾಗಿ ಸುಳ್ಳು ಹೇಳಿದ ಸ್ವಲ್ಪ ಸಮಯದ ನಂತರ ಪೇತ್ರನ ಜೀವನದಲ್ಲಿ ಬದಲಾವಣೆಯಾಯಿತು. ಆದರೆ ಅದು ಬಹಳ ನೋವಿನ ಮತ್ತು ಕಷ್ಟದ ಅನುಭವವಾಗಿತ್ತು. ಒಂದು ರೀತಿಯಲ್ಲಿ ಅವನ ಪಾರುಪತ್ಯಗಾರಿಕೆಯು ಮತ್ತೆ ಸರಿಪಡಿಸಲಾಯಿತು.ಪೇತ್ರನು ಈಗ ಬದಲಾದ ವ್ಯಕ್ತಿಯಾಗಿದ್ದನು, ಮತ್ತು ಅವನ ಜೀವನ ಹೊಸ ದಿಕ್ಕಿನಲ್ಲಿ ಹೋಗುತ್ತಿತ್ತು. ಆದರೆ ಅದು ಬಹಳಷ್ಟು ಹೊಡೆತಕ್ಕೆ ಸಿಲುಕಿತ್ತು.

ಚರ್ಚಿಸಬೇಕಾದ ಪ್ರಶ್ನೆಗಳು

1. 'ಯಾವನಿಗಾದರೂ ನನ್ನ ಹಿಂದೆ ಬರುವುದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ತಾನು ನಿರಾಕರಿಸಿ ತನ್ನ ಶಿಲುಬೆಯನ್ನು ದಿನಾಲೂ ಹೊತ್ತು ಕೊಂಡು ನನ್ನ ಹಿಂದೆ ಬರಲಿ' ಲೂಕ 9:23 ರಲ್ಲಿ ಯೇಸುವು ಹೇಳಿರುವ ಈ ಮಾತುಗಳು ಪರಿಶುದ್ಧತೆಯಲ್ಲಿ ಯಾವ ಪಾತ್ರವನ್ನು ವಹಿಸುತ್ತವೆ. ಯಾವುದು ಶಿಲುಬೆಗೆ ಹಾಕಲ್ಪಟ್ಟಿದೆ ಗಲಾತ್ಯ 6:14. ಪ್ರಾಯೋಗಿಕವಾದ ಪರಿಶುದ್ಧತೆಯು ದೇವರ ಹಾಗೆ ಆಲೋಚನೆ ಮಾಡಲು ನಮಗೆ ಹೇಗೆ ಸಹಾಯ ಮಾಡುತ್ತದೆ.

2. ಕ್ರೈಸ್ತರ ಜೀವನ ಹಾಗೂ ದೇವರನ್ನು ಹಿಂಬಾಲಿಸುವುದರಲ್ಲಿ ಎದುರಾಗುವ ಕಷ್ಟಗಳು ಮತ್ತು ನೋವುಗಳ ಕುರಿತಾಗಿ ನಿಮ್ಮ ಸ್ವಂತ ಜೀವನದ ಕುರಿತಾಗಿ ಆಲೋಚಿಸಿರಿ? ನಿಮ್ಮ ತರಗತಿಯಲ್ಲಿರುವವರು ಇದರ ಕುರಿತಾಗಿ ಮುಕ್ತವಾಗಿ ಚರ್ಚಿಸಲಿ. ಬೇರೆಯವರ ಅನುಭವಗಳಿಂದ ನಾವು ಏನು ಕಲಿಯಬಹುದು.

3. ಸೇವೆಂತ್ ಡೇ ಅಡ್ವೆಂಟಿಸ್ಟ್ ರು ನಂಬುವ ಇತರ ಸಿದ್ದಾಂತಗಳ ಕುರಿತಾಗಿ ಆಲೋಚಿಸಿರಿ ಅದು ಸಬ್ಬತ್ ಆಗಿರಬಹುದು, ಸತ್ತವರ ವಿಷಯವಾಗಿರಬಹುದು, ಸೃಷ್ಟಿ, ಎರಡನೇಯ ಬರೋಣ, ಇನ್ನೂ ಇತರ, ಈ ಎಲ್ಲಾ ಸಿದ್ದಾಂತಗಳು ನಮ್ಮ ಜೀವನದಲ್ಲಿ ಯಾವ ಬದಲಾವಣೆಯನ್ನು ತರಲು ಸಾಧ್ಯವಿದೆ.